# 'ಸುಧಾ' ಜೊತೆಗಿನ ಓದುಗರ ಒಡನಾಟ

## ಮಾದರಿ, ಮಾರ್ಗಸೂಚಿ

ಜೀವನವು ಕಾಲಚಕ್ರದ ಚಲನೆಯ ಅನುಸಾರವಾಗಿ ಸಾಗಿ ಅನೇಕ ಬದಲಾವಣೆಗಳನ್ನು ಕಾಣುತ್ತದೆ. ಹಾಗೇ ಹಲವು ಬದಲಾವಣೆಗಳನ್ನು ಕಾಣುತ್ತಾ 'ಸುಧಾ' ಕೂಡ 60ರ ವಜ್ರ ಮಹೋತ್ಸವ ಆಚರಿಸುತ್ತಿದೆ. 'ಸುಧಾ' ಮತ್ತು ನನ್ನ ಭೇಟಿ ಹತ್ತು ವರುಷಗಳ ಹಿಂದಿನದ್ದು. ಒಂದು ಮಾದರಿ ಪತ್ರಿಕೆ. ಲೇಖನಗಳು, ಕಥೆ, ನಕ್ಕುಬಿಡಿ, ಧಾರಾವಾಹಿಗಳು ಪ್ರೇರಣೆ, ಮಾರ್ಗಸೂಚಿ.

—ಪ್ರಜ್ವಲ್ ಡಿಸೋಜ, ಬೆಂಗಳೂರು

## ಮನಮುಟ್ಟುವ ಲೇಖನಗಳ ಗುಚ್ಛ

'ಸುಧಾ' ಪತ್ರಿಕೆಯನ್ನು ಪ್ರಾರಂಭದಿಂದಲೂ ನಿರಂತರವಾಗಿ ಓದುತ್ತಿರುವ ಅಸಂಖ್ಯಾತ ಓದುಗರಲ್ಲಿ ನಾನೂ ಒಬ್ಬ. ಆಗ ಬರುತ್ತಿದ್ದ ಬೀಚಿಯವರ ನೀವು ಕೇಳಿದಿರಿ, ಎಚ್‌ಎಸ್‌ಕೆ ಅವರ ವ್ಯಕ್ತಿ ವಿಶೇಷ, ಕಲಾವಿದರ ಕುರಿತಾದ ಬಣ್ಣದ ಬದುಕು, ಡಿವಿಜಿ ಅವರ ಜ್ಞಾಪಕ ಚಿತ್ರಗಳು, ಕ್ರೀಡಾಪಟುಗಳ ಕುರಿತ ಲೇಖನಗಳು, ಆರೋಗ್ಯದ ಬಗ್ಗೆ ಮಾಹಿತಿ, ಗುಣಮಟ್ಟದ ಧಾರಾವಾಹಿ ಎಲ್ಲವೂ ಮನಮೆಚ್ಚುವಂಥದ್ದಾಗಿದ್ದವು.

—ಎಂ. ಮಲ್ಲಿಕಾರ್ಜುನ

## ಬತ್ತದ ಸುಧೆಯ ಸೆಲೆಯಾಗಿರಲಿ

'ಸುಧಾ' ಹುಟ್ಟಿನಿಂದಲೇ ನನ್ನ, ಅವಳ ಅನುಬಂಧ ಆರಂಭವಾಗಿತ್ತು. ಬಾಲ್ಯದಿಂದಲೂ 'ಸುಧಾ' ಓದುತ್ತಲೇ ಬೆಳೆದ ನನಗೆ ನಡುವೆ 10 ವರ್ಷಗಳು 'ಸುಧಾ' ಸಹವಾಸ ಸಿಗದೇ ಚಡಪಡಿಸಿದ್ದೆ! 70ರ ದಶಕದಲ್ಲಿ ಪ್ರಕಟವಾಗುತ್ತಿದ್ದ ಧಾರಾವಾಹಿಗಳಿಗೆ ಕಾಯುತ್ತಿದ್ದ ದಿನಗಳು, ಅದಕ್ಕಾಗಿ ಅಣ್ಣನೊಂದಿಗೆ ಜಗಳವಾಡಿದ್ದ ನೆನಪು ಹಸಿರಾಗಿದೆ! ಪದಬಂಧ, ಪ್ರಶ್ನಾಂಕಣಗಳು ನನ್ನ ನೆಚ್ಚಿನ ಪುಟಗಳು. 'ಸುಧಾ' ಎಂದೂ ಬತ್ತದ ಸುಧೆಯ ಸೆಲೆಯಾಗಿರಲಿ!

—ಕೆ.ಆರ್. ಶಕುಂತಲಮ್ಮ

## ಕ್ರೀಡಾಪಟುಗಳ ಮರುಕಳಿಕೆಯಾಗಲಿ

'ಸುಧಾ' ಆರು ದಶಕಗಳ ಇತಿಹಾಸದಲ್ಲಿ ನನ್ನಂತಹ ಲಕ್ಷಾಂತರ ಓದುಗರನ್ನು ಅಂದಿನಿಂದ ಇಂದಿನವರೆಗೂ ರಂಜಿಸುತ್ತಲೇ ಬಂದಿದೆ. ಆಗ ಒಂದು ಪುಟ ಅಂದಿನ ಕ್ರೀಡಾಪಟುಗಳ ಪರಿಚಯ ನೀಡುತ್ತಿತ್ತು. ಆ ಪುಟಗಳನ್ನು ಮತ್ತೆ ಪರಿಚಯಿಸಿದರೆ ನಮಗೆ ಅಂದಿನ ಹೀರೊಗಳ ಮರುನೆನಪು ಮತ್ತು ಇಂದಿನವರಿಗೆ ಮಾದರಿಯಾಗುತ್ತದೆ. ಕೆಲ ಕ್ರೀಡಾಪಟುಗಳ ವಿವರ ಈಗ ದುರ್ಲಭವೆನಿಸಿದೆ. 'ಸುಧಾ' ನಮಗೆ ಅವರ ನೆನಪು ಮಾಡಿಕೊಡಲಿ.

—ಕೆ.ಎಸ್. ಸೋಮೇಶ್ವರ

## 'ಸುಧಾ' ಹಾಗೂ ಅಪ್ಪನ ನೆನಪು

ನಾನು ಚಿಕ್ಕವಳಿದ್ದಾಗಿನಿಂದ ನಮ್ಮ ಮನೆಗೆ ತರುತ್ತಿದ್ದ ಏಕೈಕ ಪತ್ರಿಕೆ 'ಸುಧಾ'. 'ಸುಧಾ'ಗೂ ನನಗೂ 45 ವರ್ಷಗಳ ನಂಟು. ಪ್ರತಿ ಗುರುವಾರ ಬರುತ್ತಿದ್ದ 'ಸುಧಾ'ಗೆ ನಾವೆಲ್ಲ ಚಾತಕಪಕ್ಷಿಯಂತೆ ಕಾದಿದ್ದು, ಯಾರಿಗೆ ಮೊದಲು ಸಿಗುತ್ತದೋ ಅವರು ಪೂರ್ತಿ ಓದಿ ಮುಗಿಸುವವರೆಗೂ ಇನ್ನೊಬ್ಬರಿಗೆ ಕೊಡುತ್ತಿರಲಿಲ್ಲ. ಅದಕ್ಕಾಗಿ ಗೇಟಿನ ಬಳಿ ಅಪ್ಪ ಪೇಟೆಯಿಂದ ಬರುವುದನ್ನೇ ಕಾಯುತ್ತಿದ್ದೆವು.

ಎಳೆಯರ ಅಂಗಳ, ಫೋಟೊ ಕಾಮಿಕ್ಸ್ ನಮಗೆಲ್ಲ ಅಚ್ಚುಮೆಚ್ಚು. ದೊಡ್ಡವರಾದ ಮೇಲೆ ಧಾರಾವಾಹಿಗಳು, ಕಥೆಗಳು, ಲೇಖನಗಳನ್ನು ಓದುತ್ತಿದ್ದೆವು. ಇಷ್ಟವಾದ ಧಾರಾವಾಹಿಗಳನ್ನು ಸಂಗ್ರಹಿಸುತ್ತಿದ್ದೆವು (ಅದರಲ್ಲೂ ಒಂದು ಧಾರಾವಾಹಿ, ಹೆಸರು ನೆನಪಾಗುತ್ತಿಲ್ಲ, ಅದರಲ್ಲಿ ಬರುವ ಒಂದು ಪಾತ್ರ ರಿಚಿ ರಿಚರ್ಡ್ಸನ್– ನೀಲಿ ಕಂಗಳ ಹುಡುಗ ತುಂಬಾ ಇಷ್ಟವಾಗಿತ್ತು). ಕವಿಗಳ ಪರಿಚಯ, ಕ್ರಿಕೆಟಿಗರ ಬ್ಲೋ ಅಪ್‌ಗಳ ದೊಡ್ಡ ಸಂಗ್ರಹವೇ ನಮ್ಮಲ್ಲಿತ್ತು. ಈಗಲೂ ಪತ್ರಿಕೆ ನೋಡಿದರೆ ನನ್ನ ಅಪ್ಪನ ನೆನಪಾಗುತ್ತದೆ!

—ಶೋಭಾ ಸಂಪತ್, ಬೆಂಗಳೂರು

## ಎವರ್‌ಗ್ರೀನ್ ಹೀರೊಯಿನ್!



ಪ್ರತಿ ಗುರುವಾರ 'ಸುಧಾ' ಬರುವ ಹೊತ್ತಿಗೆ ದಿನವಹಿ ಕೆಲಸಗಳನ್ನು ಮಾಮೂಲು ದಿನಗಳಿಗಿಂತ ಬೇಗ ಬೇಗ ಮುಗಿಸಿ, ಪೂರ್ತಿ ಸಂಚಿಕೆಯನ್ನು ಅವತ್ತೇ ಓದಿಬಿಡಬೇಕೆನ್ನುವ ಕಾತುರತೆ ನನಗೆ.

ಒಂದು ಅಕ್ಷರವನ್ನೂ ಬಿಡದೆ ಓದುವುದು ನನ್ನ ಹವ್ಯಾಸ. ಸಂಚಿಕೆಯೊಂದು ನಲವತ್ತು ಪೈಸೆ ಇದ್ದಾಗಿನಿಂದ ಓದಲಾರಂಭಿಸಿದ 'ಸುಧಾ' ಪತ್ರಿಕೆಯನ್ನು ಈಗಲೂ ಅದೇ ಅಭಿಮಾನ, ಆತ್ಮೀಯತೆಯಿಂದ ಓದುತ್ತೇನೆ, ಜತನವಾಗಿ ಕಾಪಾಡುತ್ತೇನೆ.

ಅರವತ್ತರ ಚಿರಯುವತಿ 'ಸುಧಾ' ನನ್ನ 'ಎವರ್‌ಗ್ರೀನ್ ಹೀರೊಯಿನ್'.

—ಅಂಬುಜಾ ಶ್ರೀಧರ್, ಮೈಸೂರು

## 'ಸುಧಾ' ಎಂದರೆ...

ಸುಧಾ ಎಂದರೆ ವಾರದ ಸಾರ
ಸುಧಾ ಎಂದರೆ ಎಲ್ಲರ ಸ್ವರ
ಸುಧಾ ಎಂದರೆ ಕನ್ನಡ ಹಾರ
ಸುಧಾ ಎಂದರೆ ನಿಲ್ಲದ ಧಾರಾ

—ಮೇಟಿ ಕೊಟ್ರಪ್ಪ, ವಿಜಯನಗರ